ಮೈಸೂರು ಸಕ್ಕರೆ ಕಾರ್ಖಾನೆಯವರು ಎರಡನೇ ದರ್ಜೆಯ ಸಕ್ಕರೆಯನ್ನು ಮಾರಾಟ ಮಾಡಿರುವುದು

೭೧೩. ಶ್ರೀ ಎಂ. ಎಚ್. ಜೋರಯ್ಯ (ಮಂಡ್ಯ).–ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :—

ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವರ್ಗದವರು ಮುಂಬೈನಲ್ಲಿ ದ್ವಿತೀಯ ದರ್ಜೆಯ ಸಕ್ಕರೆಯನ್ನು ಪ್ರಥಮ ದರ್ಜೆಯ ಸಕ್ಕರೆಯೆಂದು ಮಾರಾಟ ಮಾಡಿದ್ದು, ಆ ಪ್ರಕರಣದಲ್ಲಿ ಸಂಬಂಧ ಪಟ್ಟವರ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಎಂ ಕೃಷ್ಣ (ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು).–ಕಾರ್ಖಾನೆಯ ಆಡಳಿತ ವರ್ಗದವರು ಮುಂಬೈನಲ್ಲಿ ದ್ವಿತೀಯ ದರ್ಜೆಯ ಸಕ್ಕರೆಯನ್ನು ಪ್ರಥಮ ದರ್ಜೆಯ ಸಕ್ಕರೆಯೆಂದು ಯಾವಾಗಲೂ ಮಾರಾಟ ಮಾಡಿಲ್ಲ

ಶ್ರೀ ಎಂ. ಎಚ್. ಜೋರಯ್ಯ.—ಸ್ವಾಮಿ. ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವರ್ಗದವರು ದ್ವಿತೀಯ ದರ್ಜೆಯ ಸಕ್ಕರೆಯನ್ನು ಪ್ರಥಮ ದರ್ಜೆಯ ಸಕ್ಕರೆಯೆಂದು ಮಾರಾಟ ಮಾಡಿರ ತಕ್ಕಂಥದ್ದೂ ಏನಾದರೂ ತಮ್ಮ ಗಮನಕ್ಕೆ ಬಂದಿದೆಯೇ ? ಹಾಗೆ ಗಮನಕ್ಕೆ ಬಂದಿದ್ದರೆ ಏನು ಕ್ರಮವನ್ನು ತೆಗೆದುಕೊಂದಿದ್ದೀರಿ ?

† ಶ್ರೀ ಎಸ್. ಎಂ. ಕೃಷ್ಣ.—೭೬-೬-೧೯೭೪ರಲ್ಲಿ ಶುಗರ್ ಇನ್ಸ್‌ಪೆಕ್ಟರ್‌ರವರು, ಮಂಡ್ಯ ಶುಗರ್ ಫ್ಯಾಕ್ಟರಿಗೆ ಹೋಗಿ, ೨೪ ಸ್ಯಾಂಪಲ್ಸ್‌ನ್ನು ತೆಗೆದುಕೊಂಡು ಹೋಗಿದ್ದಾರೆ. ಅವನ್ನು ಪರೀಕ್ಷೆ ಮಾಡಿದ ನಂತರ ಆ ಕಂಪನಿಗೆ ಅವರು ಶೋಕಾಸ್ ನೋಟೀಸ್ ಕೊಟ್ಟಿದ್ದಾರೆ. ಅದಕ್ಕೆ ಅವರು ಉತ್ತರವನ್ನೂ ಕೂಡ ಕೊಟ್ಟಿದ್ದಾರೆ.

ಶ್ರೀ ಎಂ ಎಚ್. ಜೋರಯ್ಯ.—ಹಾಗಾದರೆ ಅದು ನಿಜವಾಗಿದ್ದರೆ ಏನು ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಿ ಎಂಬುದನ್ನು ತಿಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್ ಎಂ ಕೃಷ್ಣ.– ಶೋಕಾಸ್ ನೋಟೀಸಿಗೆ ಉತ್ತರವಾಗಿ ಅವರು ಕ್ವಾಲಿಟಿಯಲ್ಲಿ ಸ್ವಲ್ಪ ಡಿಸ್ಕ್ರಿಪೆನ್ಸಿ ಇದೆ ಎಂದು ಅವರು ಸಮಜಾಯಿಷಿ ಕೊಟ್ಟಿದ್ದಾರೆ. ಅದಕ್ಕೆ ಗೌವರ್ನಮೆಂಟ್ ಆಫ್ ಇಂಡಿಯಾದವರು ಏನು ಮಾಡುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

Sub-plan for the Welfare of Scheduled Castes/Scheduled Tribes.

726. M H. JAYAPRAKASH NARAYAN (Sirsi).—Will the Minister for Rural Development and Social Welfare be pleased to state :—

(*a*) whether any guidelines have been issued by the Planning Commission and Government of India to the State Government to formulate sub-plan for the welfare of Scheduled Castes and Scheduled Tribes in the State ;

(*b*) if so, the total outlay indicated by different departments in the State for the welfare of Scheduled Castes and Scheduled Tribes under the general sector programmes in their respective departments in the Vth Five Year Plan ;

(*c*) the names of the departments and the programmes proposed To be taken up by them for the welfare of Scheduled Castes/Scheduled tribes under general sector programme in the Vth Five Year Plan and the tentative allocation made in each department for the welfare of Scheduled Castes/Scheduled Tribes ?

SRI N. RACHIAH (Minister for Rural Development and Social Welfare).—

(*a*) Government of India have issued guidelines.

(*b*) Rs. 2,654-81 lakhs.

(*c*) A brochure on sub-plan for the welfare of Scheduled Castes/Scheduled Tribes under General sector under Vth Five Year Plan is placed on the Table of the House. *

ಶ್ರೀ ಎಂ. ಪಿ. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಕೇಂದ್ರ ಸರ್ಕಾರದವರು ಮತ್ತು ಪ್ಲಾನಿಂಗ್ ಕಮಿಷನರ್‌ರವರು ಒಂದು ಸಬ್ ಪ್ಲಾನ್‌ನ್ನು ತಯಾರು ಮಾಡಿ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ವ್ಯವಸ್ಥೆ ಮಾಡಬೇಕೆಂದು ಸೂಚನೆ ಇತ್ತಿದ್ದು, ಆದರ ಪ್ರಕಾರ ಒಂದು ಪ್ಲಾನನ್ನು ಮಾಶ್ರ ಅಂದ ಚೆನ್ನಾಗಿ ಅಚ್ಚು ಮಾಡಿ ಈ ಮನೆಯ ಮುಂದಿಟ್ಟಿದ್ದೀರಿ. ಅದರ ಪ್ರಕಾರ ಒಂದೊಂದು ವರ್ಷಕ್ಕೆ ೫—೫ ಕೋಟಿ ರೂಪಾಯಿಗಳ ಹಾಗೆ ಖರ್ಚಾಗಬೇಕಾಗಿತ್ತು. ಒಟ್ಟು ೨೬ ಕೋಟಿ ಚಿಲ್ಲರೆ ಹಣ ಖರ್ಚು ಮಾಡಿರಬೇಕಾಗಿತ್ತು. ಆದರೆ ತಾವು ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಏನು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ಸ್ವಾಮಿ ?

† ಶ್ರೀ ಎನ್. ರಾಚಯ್ಯ.—ಕೇಂದ್ರ ಸರ್ಕಾರದ ಮತ್ತು ಪ್ಲಾನಿಂಗ್ ಕಮಿಷನರ್‌ರವರು ಆದೇಶದ ಮೇರೆಗೆ ಅವನ್ನು ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ಸಬ್ ಪ್ಲಾನ್‌ನ್ನು ತಯಾರು ಮಾಡಿ ಅದಕ್ಕೆ ಕ್ಯಾಬಿನೆಟ್‌ನಲ್ಲೂ ಅನುಮತಿಯನ್ನು ಕೂಡ ದೊರಕಿಸಿಕೊಳ್ಳಲಾಗಿದೆ. ಆ ಒಂದು ದಿಶೆಯಲ್ಲಿ, ಕ್ಯಾಬಿನೆಟ್ ಡಿಸಿಷನ್ ಪ್ರಕಾರ ಆಯಾ ಡಿಪಾರ್ಟ್‌ಮೆಂಟಿನ ಮುಖಾಂತರ ಹಣವನ್ನು ಖರ್ಚು ಮಾಡಬೇಕು ಎನ್ನತಕ್ಕಂಥ ಒಂದು ಯೋಜನೆಯನ್ನು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಈಗಾಗಲೇ ಸಂಬಂಧ ಪಟ್ಟ ಅಧಿಕಾರಿಗಳಿಗೆ ಅಂದರೆ ಡೆವಲಪ್‌ಮೆಂಟ್ ಕಮಿಷನರ್, ಸೋಶಿಯಲ್ ವೆಲ್‌ಫೇರ್ ಸೆಕ್ರಟರಿಯವರಿಗೆ ಆದೇಶ ಕೊಟ್ಟಿದ್ದೇವೆ. ಇದರ ಬಗ್ಗೆ ಈಗಾಗಲೇ ಒಂದೆರಡು ಮೀಟಿಂಗ ಗಳನ್ನು ಮಾಡಿದ್ದೇವೆ, ಆದಷ್ಟು ಬೇಗ ತೀರ್ಮಾನವಾಗಿ ಈ ಸಬ್ ಪ್ಲಾನ್‌ನಂತೆ, ಯೋಜನೆಯನ್ನು ಜಾರಿಗೆತರಬೇಕು ಎಂದೂ ಸರ್ಕಾರಕ್ಕೂ ಮನಸ್ಸಿದೆ.

ಶ್ರೀ ಎಚ್. ಎಂ ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಈಗ ಏನು ವರ್ಷಕ್ಕೆ ೫—೫ ಕೋಟಿ ರೂಪಾಯಿಗಳ ಹಾಗೆ ಖರ್ಚಾಗಬೇಕಾಗಿತ್ತು ಆ ರೀತಿ ಖರ್ಚಾಗದೇ ಇದ್ದುದರಿಂದ ಅದು ಲ್ಯಾಪ್ಸ್ ಆಗುತ್ತದೆಯೇನೋ ಎನ್ನುವ ಭಾವನೆ ನಮಗುಂಟಾಗಿದೆ. ಆದುದರಿಂದ ೨೬ ಕೋಟಿ ಚಿಲ್ಲರೆ ಹಣವೆಲ್ಲವೂ ಕೂಡ ಖರ್ಚಾಗತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ ? ಇದರ ಬಗ್ಗೆ ಒಂದು ಆಭಯವಾದನವನ್ನು ಕೊಡುತ್ತೀರಾ ? ಜೊತೆಗೆ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಏನು ಮಾಡಿದ್ದೀರಿ ? ಅಲ್ಲಿಗೆ ೬೧ ಸಾವಿರದ ೪೭೬ ಅಪ್ಲಿಕೇಷನ್‌ಗಳು ಬಂದಿದೆ. ಅಲ್ಲಿ ಸಾಲ ಕೇಳಿರುವುದು ೨೩ ಕೋಟಿ ನೀವು ಕೊಟ್ಟಿರತಕ್ಕಂಥದ್ದು ಕೇವಲ ೫೦ ಲಕ್ಷ ರೂಪಾಯಿಗಳು, ಇದಕೋಸ್ಕರ ಪ್ಲಾನ್‌ನಲ್ಲಿರುವ ದುಡ್ಡನ್ನು ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಕೊಟ್ಟು ಅಲ್ಲಿ ಸಾಲ ವನ್ನು ಸಬ್ಸೀಡಿ ಹೆಚ್ಚಾಗಿ ದೊರೆಯುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಕೊಟ್ಟಿರುವ ಹಣದಲ್ಲಿ ಒಂದು ರೂಪಾಯಿ ಕೂಡ ಖರ್ಚಾಗಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಹತ್ತಾರು ಕೋಟಿ ರೂಪಾಯಿಗಳು ಬೇಕೆನ್ನುವುದಾದರೆ ಅವರು ಬೇಡಿಕೆಯನ್ನು ಸಲ್ಲಿಸಲಿ, ಆಗ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ. ಇನ್ನು ೨೬ ಕೋಟಿ ಚಿಲ್ಲರೆ ವಿಚಾರದಲ್ಲಿ ಇನ್ನು ೩ ವರ್ಷಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡ ಬಹುದು. ಈ ದಿಶೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಯೋಚನೆ ಮಾಡುತ್ತಿದ್ದೇವೆ.

---

* Copy placed in the Karnataka Legislature Library vide No. 48/dated 12th May 1976.

ಇದಕ್ಕೆ ಎಲ್ಲಾ ಇಲಾಖೆಯವರೂ ಸಹಕಾರವನ್ನು ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ನಾವು ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದೇವೆ ಅದರ ಪ್ರಕಾರ ತೀವ್ರವಾಗಿ ಜಾರಿಗೆ ಕೊಡತಕ್ಕಂಥವರ ಬಗ್ಗೆ ತಮಗೆ ಭರವಸೆಯನ್ನು ಕೊಡಬಲ್ಲೆ.

ಶ್ರೀ ಎಂ. ಎಚ್ ಜಗನ್ನಾಥ್ ನಾರಾಯಣ್ —ಸ್ವಾಮಿ, ಶೇಕಡ ೧೮ರ ಪ್ರಕಾರ ಬಜೆಟಿನಲ್ಲಿ ಹಣವನ್ನು ವಿಂಗಡಿಸಲಾಗಿರಿ, ಸಬ್ ಪ್ಲಾನನ್ನು ತಯಾರಿಸಿದ್ದೀರಿ. ಆದರೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ನಲ್ಲಿ, ಕಾರ್ಪೊರೇಷನ್‌ಗಳಲ್ಲಿ: ಬೋರ್ಡ್‌ಗಳಲ್ಲಿ, ಯೂನಿವರ್ಸಿಟಿಗಳಲ್ಲಿ ಈ ತತ್ವವನ್ನು ಅನುಸರಿಸುತ್ತಿಲ್ಲ. ಇದರ ಬಗ್ಗೆ ತಮ್ಮ ಅಭ್ಯಂತರವಿಲ್ಲವಾಗಿದ್ದರೂ ಸಹ, ಹಣವನ್ನು ವಿಂಗಡಿಸಲಾಗಿರುವುದು, ಹಣವನ್ನು ಖರ್ಚು ಮಾಡತಕ್ಕಂಥ ವ್ಯವಸ್ಥೆ ಇವುಗಳನ್ನು ಮಾಡಲು ಅದನ್ನೂ ಸಹ ಸಬ್ ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಈಗಾಗಲೇ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟಿರಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರದವರು ಇನ್ನೂ ತೀರ್ಮಾನ ಮಾಡಿಲ್ಲ. ೫ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ ಪೆಚ್ಚಿಗೆ ಹಣವನ್ನು ಒದಗಿಸಿದರೆ ಶೇಕಡ ೧೮ ಭಾಗ ಅವರಿಗೆ ಪೆಚ್ಚಿಗೆ ಬರುತ್ತದೆ, ಹಿಂದುಳಿದವರು, ಸೆಡ್ಯೂಲ್ ಕ್ಯಾಸ್ಟ್ —ಟ್ರೈಬ್ಸ್ ಜನಾಂಗಗಳಿಗೆ ಸಂಭಂದಪಟ್ಟಹಾಗೆ ಅವರೆಲ್ಲರಿಗೂ ಇದು ಅನ್ವಯಿಸ ಬೇಕು ಎನ್ನುವುದು ಸರ್ಕಾರದ ಉದ್ದೇಶ ಹಾಗೂ ಅದು ರಾಜ್ಯಾಂಗದಲ್ಲಿರುವ ಹಾಗೆ ಅದು ಎಲ್ಲಾ ಪ್ರದೇಶಗಳಿಗೂ, ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ.

Water Supply Scheme in Srirangapatna

767. SMT. DAMAYANTHI BORE GOWDA (Srirangapatna).—Will the Minister for Law and Municipal Administration be pleased to state:—

(*a*) when the foundation stone was laid for the Water Supply Scheme in Srirangapatna ;

(*b*) the progress of work ;

(*c*) when the work will be completed. ?

SRI D. K. NAIKAR (Minister for Law and Municipal Administration) —

(*a*) On 8-5-1975.

(*b*) Work on the Rising main work has been taken up and is in progress. Tenders are being called for the work of overhead tank and for machinery.

(*c*) In about two years.

SMT. DAMAYANTHI BORE GOWDA —It is stated in the reply that tenders are being called for the work of overhead tank and for machinery. Why this delay ?

† SRI D. K. NAIKAR.—It is mentioned in the reply that the foundation stone was laid on 8-5-1975. Thereafter the matter has been referred for administrative approval. So, there is no delay.